ಮುರಿದಳು. ನಂತರ ನಾಗರಾಜನಿಗೆ, 'ಲೇ ನಾಗ್ರಾಜ, ನನ್ಮೊಮ್ಮಗಳು ತೇಟ್ ನನ್ನಂಗೆ ಅವುಳಲ್ವೆ' ಎಂದು ಕೇಳಿದಳು. ಅವನು ತುಸುವೆ ನಕ್ಕು, 'ಅಲ್ಲಕ್ಕೊ ಅವುಳ ಕಲರ್ರೇನು ನಿನ್ ಕಲರ್ರೇನು. ಸುಮ್ಕೆ ಕನ್ಸು ಕಾಣ್ಬೇಡ ಕೆಲಸ ನೋಡೋಗು' ಎಂದು ಹಿತವಾಗಿ ರೇಗಿದ್ದ. ಅದಕ್ಕವಳು, 'ಲೇ ಗುಡ್ಬುದ್ದಿ ಮುಂಡೇದೆ, ಪೋಟೋದಾಕ ಎಲ್ಲಾರು ಕಲರ್ ಕಲರಾಗೆ ಕಾಣ್ತಾರೆ. ಅಷ್ಟು ಗೊತ್ತಾಗ್ದೇನ್ಲ ನಿಂಕೆ... ಸೊಟ್ಟ ಮೂತೀದೆ' ಎಂದು ಶುರುವಿಟ್ಟುಕೊಂಡಳು. ನಾಗರಾಜ ಇನ್ನಿಲ್ಲಿರುವುದು ಸರಿಯಲ್ಲವೆಂದುಕೊಂಡು ಜಾಗ ಖಾಲಿ ಮಾಡಿದ.

ನಂಜಮ್ಮನ ಸಂಭ್ರಮಕ್ಕೆ ಎಣೆಯಿಲ್ಲದಾಯಿತು. ಅವಳ ಮನಸು ಮೊಮ್ಮಗಳನ್ನು ಕಂಡು ಇನ್ನಿಲ್ಲದ ಚೈತನ್ಯವನ್ನು ತುಂಬಿಕೊಂಡಿತು. ಅದೇ ಉತ್ಸಾಹದಲ್ಲೆ ಮನೆಯೆಲ್ಲ ಸ್ವಚ್ಛ ಮಾಡಿದಳು. ಗೋಡೆ ಕಿತ್ತು ಬಂದಿರುವ ಕಡೆಗೆ ಒಂದಷ್ಟು ಸಿಮೆಂಟ್ ಮೆತ್ತಿಸಿ ಮುಚ್ಚಲೆ ಎಂದುಕೊಂಡಳು. ನಂತರ ತೇವವಿರುವುದರಿಂದ ಒಂದೆರಡು ದಿನ ಕಳೆದ ಮೇಲೆ ಸರಿಮಾಡಿದರೆ ಆಯಿತೆಂದುಕೊಂಡು ಒಲೆಯ ಮೇಲೆ ಮುದ್ದೆಗಿಟ್ಟು ಊರ ದೇವಸ್ಥಾನದ ಬಳಿ ನಡೆದಳು. ಅವಳಿಗೆ ಕನಿಷ್ಠ ಹತ್ತು ಮಂದಿಯ ಬಳಿಯಾದರು ಆ ವಿಷಯವನ್ನು ಹೇಳಿಕೊಳ್ಳಬೇಕಿತ್ತು. ದಾರಿಯಲ್ಲಿ ಬಂದು ಹೋಗುವವರಿಗೆಲ್ಲ ನಾಳೆ ಮಗ ಸೊಸೆ ಮೊಮ್ಮಗಳು ಬರುತ್ತಿರುವ ವಿಷಯವನ್ನು ಜೋರಾಗಿ ಹೇಳತೊಡಗಿದಳು. ಪ್ರತಿ ಸಲ ಹಾಗೆ ಹೇಳುವಾಗಲು ತನ್ನ ಮೊಮ್ಮಗಳು ಥೇಟ್ ತನ್ನ ತರವೆ ಇರುವುದಾಗಿ ಒತ್ತಿ ಒತ್ತಿ ಹೇಳುತ್ತಿದ್ದಳು. ದೇವಸ್ಥಾನದ ಪಕ್ಕದ ಮನೆಯ ಮುನೆಮ್ಮ, 'ಓ ಅಂಕಾದ್ರೆ ನಿಂತರಾನೆ ಗಯ್ಯಾಳಿ ಅನ್ನು' ಎಂದು ಹೇಳಿದ್ದಕ್ಕೆ, 'ಲೇ ಮುನೆಮ್ಮಕ್ಕ ನಿನ್ನಂತೋಳ್ನ ಸಂಬಾಳಿಸ್ಬೇಕು ಅಂತಂದ್ರ ಸುಮ್ಕೇನ. ನಂತರಾ ಗಯ್ಯಾಳೀನೆ ಆಗ್ಬೇಕು. ಅವುಳು ನಾಳೀಕೆ ಬರ್ಲಿ ಇರು... ನಿಂಕೆ ಮುಕಕ್ಕೆ ಮಂಗಳಾರ್ತಿ ಎತ್ಸಿ ಊರ ಮುಂದ ನಿನ್ನ ಮಾನ ಹರಾಜಾಕ್ಸಿಲ್ಲ ಅಂದ್ರ ನನ್ಹೆಸ್ರು ನಂಜೀನೆ ಅಲ್ಲ' ಎಂದು ನುಡಿದು ಮುನೆಮ್ಮ ಒಳ ಹೋಗುವಂತೆ ಮಾಡಿದಳು. ನಂತರ ದೇವಸ್ಥಾನದ ಎದುರಿಗಿರುವ ಅಂಗಡಿಯಲ್ಲಿ ಬೇಳೆ ಬೆಲ್ಲ ಮೈದಾ ತೆಗೆದುಕೊಂಡು, 'ಅಯ್ಯೊ ನನ್ಗುಡ್ಬುದ್ದೀಗೆ... ಒಲೆ ಮೇಲೆ ಎಸರಿಟ್ಟಿದ್ದೆ' ಎಂದು ನುಡಿಯುತ್ತ ಬಿರಬಿರನೆ ಮನೆಯ ಕಡೆಗೆ ನಡೆಯತೊಡಗಿದಳು.

ಮಾರನೆ ದಿನ ಮುಂಜಾನೆ ಐದಕ್ಕೆಲ್ಲ ಎದ್ದ ನಂಜಮ್ಮ ತೊಗರಿ ಬೇಳೆ, ಬೆಲ್ಲ ಒಲೆ ಮೇಲಿಟ್ಟು ಬೇಯಿಸಿ ರುಬ್ಬಿ ಹೂರಣ ತಯಾರು ಮಾಡಿದಳು. ರಾತ್ರಿಯೆ ಮೈದ ಕಲಿಸಿಟ್ಟಿದ್ದಳಾದ್ದರಿಂದ ರುಬ್ಬುವ ಕೆಲಸ ಮುಗಿದ ತಕ್ಷಣ ಬಾಣಲಿಗೆ ಎಣ್ಣೆ ಹಾಕಿ ಹೂರಣದ ಉಂಡೆಗಳಿಗೆ ನಾದಿದ ಮೈದಾ ಹಿಟ್ಟನ್ನು ಸುತ್ತಿ ಕಾದ ಎಣ್ಣೆಯೊಳಗೆ ಬಿಟ್ಟು ಸುಗುಂಡೆಗಳನ್ನು ಮಾಡತೊಡಗಿದಳು. ಅದರ ಕಮ್ಮನೆ ವಾಸನೆಗೆ ಮರುಳಾಗಿ ನಂಜಮ್ಮನ ಮನೆಗೆ ಬಂದ ಮಂಜೇಗೌಡನ ಹೆಂಡತಿ ಸುಜಾತ, 'ಏನ್ ನಂಜಕ್ಕ ಬೆಳ್ಬೆಳಗ್ಗೆ ಈ ಪಾಟಿ ಗಮ್ಲು ಹಬ್ಬಿಸ್ತಿದ್ದಿ. ಊರ್ನಾಕಿರೊ ಯಾರೂ ಕೆಲುಸಗಳ್ಗೆ ವೋಗ್ಬಾರ್ದಂತ್ಲೋ...' ಎಂದು ನುಡಿಯುತ್ತಾ ಒಂದು ಬಿಸಿ ಬಿಸಿ ಸುಗುಂಡೆ ಎತ್ತಿಕೊಂಡು ತಿನ್ನ ತೊಡಗಿದಳು. ನಂಜಮ್ಮ, 'ಏನಿಲ್ಲ ಸುಜಾತಮ್ಮ ಅದೆ ನನ್ನ ಮೊಕ, ಸೊಸೆ, ಮೊಮ್ಮಗಳು ಬತ್ತಿದಾರಲ್ಲ ಅದ್ಕೆ. ನಮ್ ವೆಂಕ್ಟೇಸನ್ಗೆ ಸುಗುಂಟ್ಲು ಅಂದ್ರೆ ಶಾನ ಬ್ಯಮೆ' ಎಂದು ನುಡಿದು ಐದಾರು ಸುಗುಂಡೆಗಳನ್ನು ಒಂದು ಬಟ್ಟಲಿಗಾಕಿ ಬೇಡ ಬೇಡವೆಂದರು ಸುಜಾತಳ ಕೈಗೆ ಕೊಟ್ಟು, 'ಗೌನ್ಗೆ ಕೊಡು... ಅವನ್ಗೂನು ಬ್ಯಮೇನೆ' ಎಂದು ನುಡಿದು ತನ್ನ ಕೆಲಸದಲ್ಲಿ ತಲ್ಲೀನಳಾದಳು.

ಬೆಳಗ್ಗೆ ಹನ್ನೊಂದು ಗಂಟೆಯ ವೇಳೆಗೆ ಮನೆಯ ಮುಂದೆ ಕಾರು ಬಂದು ನಿಂತಿತು. ನಂಜಮ್ಮ